<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 56/2024**

| ಸಾಕ್ಷಿಯ ಹೆಸರು | ಶ್ರೀ. ತೀರ್ಥಪ್ರಸಾದ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಸಿದ್ದಲಿಂಗಯ್ಯ | 6 | 2 |
| ವಯಸ್ಸು | 48 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **21.01.2026.** | |
| ಉದ್ಯೋಗ | ಎ.ಎಸ್.ಐ., ಗಿರಿನಗರ ಠಾಣೆ | | |
| ವಾಸ ಸ್ಥಳ | ಬ್ಯಾಡರಹಳ್ಳಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2020 ರಿಂದ 2024 ರವರೆಗೆ ಬ್ಯಾಡರಹಳ್ಳಿ ಪೋಲೀಸ್ ಠಾಣೆಯಲ್ಲಿ HC ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 20.01.2021 ರಂದು ಸಂಜೆ 07.00 ಗಂಟೆ ಸಮಯದಲ್ಲಿ ಚಾಸಾ. 1 ರವರು ಡಿ.ಎಲ್ ರಸ್ತೆಗೆ ಬರಲು ಹೇಳಿದ್ದು ನಾನು ಅಲ್ಲಿಗೆ ಹೋದಾಗ ಚಾಸಾ. 1 ರವರು ಈಸ್ಟ ವೆಸ್ಟ್ ಕಾಲೇಜ್ ನ ಎದುರು ಜಾಗದಲ್ಲಿ ಯಾರೋ 5 - 6 ಹುಡುಗರು ಕೈಯಲ್ಲಿ ದೊಣ್ಣೆ ಮತ್ತು ಮಚ್ಚು ಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡುವ ದಾರಿಹೋಕರು ಮತ್ತು ವಾಹನ ಸವಾರರನ್ನು ತಡೆದು ದರೊಡೆ ಮಾಡುವ ಮತ್ತು ಸುಲಿಗೆ ಮಾಡಲು ಹೊಂಚು ಹಾಕುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಚಾಸಾ. 1 ರವರು ನನ್ನನ್ನು ನವೀನ್ ಮತ್ತು ಮಹೇಶ್ ಹಾಗೂ ಪಂಚರಾದ ಶ್ರೇಯಸ್ ಮತ್ತು ಲಿಖಿತ್ ರವರನ್ನು ಬರಮಾಡಿಕೊಂಡು ಖಾಸಾಗಿ ವಾಹನದಲ್ಲಿ ಸಂಜೆ 7.30 ಗಂಟೆಗೆ ಮೇಲೆ ಹೇಳಿದ ಸ್ಥಳಕ್ಕೆ ಹೋಗಿ ದೂರದಲ್ಲಿ ನಿಂತು ನೋಡಿದಾಗ 5- 6 ಜನರು ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡಿದ್ದು ದರೋಡೆ ಮಾಡಲು ಹೊಂಚು ಹಾಕುತ್ತಿದ್ದರು.

2. ನಾವು ಸುತ್ತುವರಿದ್ದು 4 ಆಸಾಮಿಗಳನ್ನು ಹಿಡಿದುಕೊಂಡು ಅವರ ಹೆಸರು ವಿಳಾಸ ಕೇಳಲಾಗಿ ವಿಲಿಯಮ್, ರಾಘವೇಂದ್ರ, ಅಯ್ಯಪ್ಪ ಮತ್ತು ವಿನೋದ್ ಎಂದು ಹೇಳಿದ್ದು ಓಡಿ ಹೋದವರ ಹೆಸರು ದೀಪು ಮತ್ತ ಪ್ರದೀಪ್ ಎಂದು ತಿಳಿದು ಬಂತು. ನಾವು ವಶಕ್ಕೆ ಪಡೆದ ವಿಲಿಯಮ್ ಮತ್ತು ರಾಘವೇಂದ್ರ ಕೈಯಲ್ಲಿ ಲಾಂಗ್, ಶ್ರೀನಿವಾಸ್ ಮತ್ತು ಮಹೇಶ್ ರವರು ಅಯ್ಯಪ್ಪ ಮತ್ತು ವಿನೋದ್ ರವರ ಕೈಯಲ್ಲಿ ದೊಣ್ಣೆ ಹಾಗೂ ಖಾರದ ಪುಡಿ ಇತ್ತು. ನಾನು ಆರೋಪಿಯನ್ನು ಅಯ್ಯಪ್ಪ ಹಿಡಿದುಕೊಂಡಿದ್ದು ಆತನ ಕೈಯಲ್ಲಿ ಖಾರದ ಪುಡಿ ಪ್ಯಾಕೇಟ್ ಹಾಗೂ ಮರದ ದೊಣ್ಣೆ ಇತ್ತು. ಅವುಗಳನ್ನು ಪಂಚರ ಮೂಲಕ

ಮಹಜರ್ ಮಾಡಿ ಅಮಾನತು ಪಡಿಸಿಕೊಂಡೆವು. ಸದರಿ ಪಂಚಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಲೇ ನಿಶಾನೆ.ಪಿ. 1 ಎಂದು ಗುರುತಿಸಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಬಿ) ಎಂದು ಗುರುತಿಸಲಾಯಿತು. 2 ನೇ ಆರೋಪಿ ಗೈರು ಹಾಜರು ಇದ್ದು ಗುರುತಿನ ಬಗ್ಗೆ ಆಕ್ಷೇಪಣೆ ಇಲ್ಲ. 1 ನೇ ಆರೋಪಿ ವಿಲಿಯಮ್ ಅನ್ನು ವಿ.ಸಿ. ಮೂಲಕ ಹಾಜರು ಪಡಿಸಿದ್ದು ಅನವನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಮು.ಮಾ. 1 ರಿಂದ 5 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.MBM ವಕೀಲರಿಂದ :

ನಾನು ಪ್ರತೀ ದಿನ ಠಾಣೆಗೆ 8.00 ಕ್ಕೆ ಹೋಗಿ ರಾತ್ರಿ 10.00 ಗಂಟೆಯವರೆಗೆ ಇರುತ್ತೇನೆ. ನಾವು ಮಾಗಡಿ ಮುಖ್ಯ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ಚಾಸಾ. 1 ರಿವರಿಗೆ ಮಾಹಿತಿಯನ್ನು ಸಾರ್ವಜನಿಕರು ಫೋನ್ ಮೂಲಕ ಕೊಟ್ಟರು. ಮಾಹಿತಿ ಬಂದ ಸ್ಥಳದಿಂದ ಘಟನಾ ಸ್ಥಳವು ಸುಮಾರು 1.5 ಕಿ.ಮಿ. ದೂರದಲ್ಲಿ ಇದೆ. ಚಾಸಾ. 1 ರವರು ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ಮೌಖಿಕವಾಗಿ ತಿಳಿಸಿದ್ದೆ. ನಾವು ಆ ದಿನ ಸ್ಥಳಕ್ಕೆ ಹೋಗಿಲ್ಲ, ಆರೋಪಿತರನ್ನು ಹಾಗೂ ಮು.ಮಾ. ಗಳನ್ನು ವಶಕ್ಕೆ ಪಡೆದಿಲ್ಲ ಹಾಗೂ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿ ಅಲ್ಲ. ಮಹಜರ್ ಅನ್ನು ಮೇಲಾಧಿಕಾರಿಗಳ ನಿರ್ದೇಶದಂತೆ ಚಾಸಾ. 1 ರವರು ತಯಾರು ಮಾಡಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.